

ಚಿತ್ರ: ಸತೀಶ್ ಬಡಿಗೇರ್

# ವ್ಯಕ್ತಿತ್ವದ ಕನ್ನಡಿ ಕೈಬರಹ

**ಕೈಬರಹವೇ ನಮ್ಮ ವ್ಯಕ್ತಿತ್ವವನ್ನು ಹೇಳುತ್ತದೆ. ಬರವಣಿಗೆಯ ಶೈಲಿಗೂ, ನಡತೆಗೂ ಸಂಬಂಧವಿದೆ...**

★ ಪ್ರೇಮಾ ಕುಲಕರ್ಣಿ

ಸುಂದರ ಬರಹ ವ್ಯಕ್ತಿತ್ವದ ಪ್ರತೀಕ. ಮುತ್ತು ಪೋಣಿಸಿದಂತೆ ಇರುವ ಅಕ್ಷರಗಳ ಸರಮಾಲೆ ನಿರ್ಮಲ ಹೃದಯದ ಸಂಕೇತ. ಕೈಬರಹದ ಶೈಲಿ ವ್ಯಕ್ತಿಯಲ್ಲಿನ ಗುಣ ವೈಶಿಷ್ಟ್ಯಗಳನ್ನು ಅರಿಯಬಹುದು. ಕೈ ಬರಹವನ್ನು ನೋಡಿಯೇ ಅಪರಾಧಿಗಳನ್ನು ಪತ್ತೆ ಹಚ್ಚುವ ಸಾಧ್ಯತೆಯೂ ಇದೆ.

ಓರ್ವ ವ್ಯಕ್ತಿಯ ಬರಹ ನೋಡಿಯೇ ಅವನ ವ್ಯಕ್ತಿತ್ವ ನಿರ್ಧರಿಸುವ ವಿಜ್ಞಾನಕ್ಕೆ 'ಗ್ರಾಫಾಲಜಿ' ಎನ್ನುತ್ತಾರೆ. ನುರಿತ ಗ್ರಾಫಾಲಾಜಿಸ್ಟ್ ಬರಹಗಾರನು ಪದಗಳ ನಡುವೆ ಬಿಡುವ ಅಂತರ, ಸಾಲು, ಒತ್ತಕ್ಷರಗಳನ್ನು ಬರೆಯುವ, ಎಡಕ್ಕೆ–ಬಲಕ್ಕೆ ವಾಲುವ, ಲಂಬವಾಗಿರುವ, ದೊಡ್ಡ, ಸಣ್ಣ ಅಕ್ಷರಗಳನ್ನು ಬರೆಯುವುದನ್ನು ಪರೀಕ್ಷಿಸಿ ವಿಶ್ಲೇಷಿಸುತ್ತಾರೆ. ನಂತರ ಬರಹಗಾರನ ವ್ಯಕ್ತಿತ್ವ, ಗುಣಸ್ವಭಾವ, ಆತನು ಒತ್ತಡಕ್ಕೀಡಾಗಿದ್ದಾನೆಯೇ, ಮಾನಸಿಕ ಕ್ಷೋಭೆಗೊಳಗಾಗಿದ್ದಾನೆಯೇ ಆರೋಗ್ಯ ಸರಿಯಿದೆಯೇ ಎಂದು ಪತ್ತೆ ಹಚ್ಚಿ ವ್ಯಕ್ತಿ ಚಿತ್ರಣವನ್ನು ಕೊಡುತ್ತಾರೆ.

ಬಿಳಿ ಹಾಳೆಯ ಮೇಲೆ ಅಕ್ಷರಗಳು ಮೂಡಲು ಕೈ ಕೆಲಸ ಮಾಡಬೇಕು. ಆ ಕೈಗೆ ಮೆದುಳಿನಿಂದ ಆದೇಶ ಬಂದು ಬರೆಯಲು ಪ್ರಾರಂಭಿಸುತ್ತೇವೆ. ಗಮನವಿಲ್ಲದೇ ಕೇವಲ ಬರೆಯಬೇಕೆಂದು ಕುಳಿತಾಗ ಮನದಲ್ಲಿ ಯಾವುದೋ ವಿಚಾರ ಹರಿದಾಡಲು ಆರಂಭಿಸಿ ಅಕ್ಷರಗಳು ಅಂಕುಡೊಂಕಾಗಿ ಮೂಡುತ್ತವೆ. ಚಂಚಲತೆಯಿಂದಾಗಿ ಈ ರೀತಿಯಾಗುತ್ತದೆ.

ಬರೆಯುವಾಗ ಬರಹಗಾರನ ಭಾವನಾತ್ಮಕ ಶಕ್ತಿಯ ಪ್ರದರ್ಶನವೂ ಆಗುವುದರಿಂದ ಆತ ಬರೆಯುವಾಗ ಎಷ್ಟು ಒತ್ತಡ ಹಾಕುತ್ತಾನೆ ಎಂದು ತಿಳಿಯುತ್ತದೆ. ಭಾವನಾತ್ಮಕ ಶಕ್ತಿ ಎಂದರೆ ದೈಹಿಕ, ಮಾನಸಿಕ ಶಕ್ತಿಯ ಒಟ್ಟು ಮೊತ್ತ. ಹೆಚ್ಚು ಒತ್ತಡ ಹಾಕಿ ಬರೆಯುವವರು ಜೀವನದಲ್ಲಿ ಯಶಸ್ಸು ಪಡೆಯುತ್ತಾರೆ. ಕೆಲವರ ಬರವಣಿಗೆ ತೆಳು, ಅವರು ಚಂಚಲರಾಗಿದ್ದು, ಬರೆಯಲು ಬೇಸರ ಪಟ್ಟುಕೊಳ್ಳುತ್ತಾರೆ. ಅವರಿಗೆ ಶಕ್ತಿಯ ವಿನಿಯೋಗದ ಬಗ್ಗೆ ನಿರಾಸಕ್ತಿ ಮೂಡಿರುತ್ತದೆ ಎಂದರ್ಥ.

## ವಕ್ರ ಬರವಣಿಗೆ

ಬರವಣಿಗೆಯ ವಕ್ರತೆಯೆಂದರೆ ಎಡಕ್ಕೆ–ಬಲಕ್ಕೆ ವಾಲಿರುವ ಬರಹ. ಇದೂ ಸಹ ಬರಹಗಾರನ ವ್ಯಕ್ತಿತ್ವ ನಿರೂಪಿಸಬಲ್ಲದು. ಈ ವಕ್ರ ಬರಹಗಾರರು ಹೊರಗಿನ ಒತ್ತಡಕ್ಕೆ ಭಾವನಾತ್ಮಕವಾಗಿ ಹೇಗೆ ಸ್ಪಂದಿಸುತ್ತಾರೆ ಎಂದು ತಿಳಿಸುತ್ತದೆ. ಬರಹದಲ್ಲಿ ಬಲಕ್ಕೆ ವಾಲಿದ ಅಕ್ಷರಗಳಿದ್ದಲ್ಲಿ ಬರಹಗಾರನ ಮನಸ್ಸು ಆತನ ಬುದ್ಧಿಯನ್ನು ನಿಯಂತ್ರಿಸುತ್ತಿದೆ. ಆತ ಹೆಚ್ಚು ಭಾವುಕನಾಗಿರುತ್ತಾನೆ. ಲಂಬವಾದ ಗೀಟುಗಳಿಂದ ಬರೆಯುವವನ ಬುದ್ಧಿ ಮನಸ್ಸನ್ನು ಆಳುತ್ತದೆ. ಹೀಗಾಗಿ ಆತ ತನ್ನ ಭಾವನೆಯನ್ನು, ತೊಳಲಾಟವನ್ನು ಹತ್ತಿಕ್ಕುವ ಶಕ್ತಿ ಹೊಂದಿರುತ್ತಾನೆ. ಎಡಕ್ಕೆ ವಾಲಿದ ಗೀಟುಗಳಿಂದ ಬರೆಯುವವರಿಗೆ ಭಾವನೆ ವ್ಯಕ್ತವಾಗದು.

## ಕೈ ಬರಹದ ಇತಿಹಾಸ

ಸುಮಾರು 2000 ವರ್ಷಗಳ ಹಿಂದೆಯೇ ಅರಿಸ್ಟಾಟಲ್ ಕೈಬರಹ ಮತ್ತು ವ್ಯಕ್ತಿತ್ವ ಒಂದಕ್ಕೊಂದು ಪೂರಕ ಎನ್ನುವ ಬಗ್ಗೆ ಜಗತ್ತಿನ ಗಮನ ಸೆಳೆದಿದ್ದಾನೆ. ಚೀನಿಯರು ಕೂಡ ಈ ಬಗ್ಗೆ ವಿಶ್ಲೇಷಿಸಿದ್ದು ಬರವಣಿಗೆ ಮತ್ತು ನಡತೆಗೆ ಸಂಬಂಧ ಕಂಡುಕೊಂಡಿದ್ದಾರೆ.

1622ರಲ್ಲಿ ಇಟಲಿಯ ಬೊಲೊಗ್ನಾ ವಿಶ್ವವಿದ್ಯಾಲಯದ ತತ್ವಜ್ಞಾನ ಉಪನ್ಯಾಸಕ ಹಾಗೂ ಫಿಜಿಶಿಯನ್, ವ್ಯಕ್ತಿಯ ಕೈಬರಹದ ಅಧ್ಯಯನದಿಂದ ಆತನ ನಡತೆ ಗುರುತಿಸಬಹುದು ಎಂದು ವಿಶ್ಲೇಷಿಸಿದ್ದಾರೆ. 1800ರಲ್ಲಿ ಪ್ಯಾರಿಸ್‌ನ ಒಂದು ಪ್ರತಿಷ್ಠಿತ ಶಾಲೆಯ ಮುಖ್ಯಗುರುವಾಗಿದ್ದ ಅಬ್ಬೆ ಮೈಖಿನ್ ಈ ಬಗ್ಗೆ ಪುಸ್ತಕ ಬರೆದಿದ್ದು, ಅದಕ್ಕೆ 'ಗ್ರಾಫಾಲಜಿ' ಎಂದು ಹೆಸರಿಸಲಾಗಿದೆ. ನಂತರದಲ್ಲಿ ಕ್ರೇಪಿಕ್ಸ್ ಜಾಮಿನ್ ಗ್ರಾಫಾಲಜಿ ಲಕ್ಷಣಗಳನ್ನು ಬರೆದಿದ್ದಾರೆ.

1890ರಲ್ಲಿ ಜರ್ಮನಿಯ ತತ್ವಜ್ಞಾನಿ ಹಾಗೂ ಗ್ರಾಫಾಲಾಜಿಸ್ಟ್ ಡಾ. ಲುಡ್ವಿಗ್ ಕ್ಲಾಗ್ಸ್ ಗ್ರಾಫಾಲಜಿ ಥಿಯರಿ ಬರೆದು ಅದರ ಮಹತ್ವವನ್ನು ತಿಳಿಸಿದರು.

ಸ್ವಿಸ್ ಪ್ರೊ.ಮ್ಯಾಕ್ಸ್ ಪುಲ್ವರ್ ಮೊಟ್ಟ ಮೊದಲ ಬಾರಿ ಜುರಿಚ್ ವಿಶ್ವವಿದ್ಯಾಲಯದಲ್ಲಿ ಗ್ರಾಫಾಲಜಿಯನ್ನು ಮನ:ಶಾಸ್ತ್ರದೊಂದಿಗೆ ತಳಕು ಹಾಕಿ ಉಪನ್ಯಾಸ ನೀಡಿದರು. ಈಗಿರುವ ಐ.ಕ್ಯು (ಬುದ್ಧಿಮತ್ತೆ ಪ್ರಮಾಣ) ಪರೀಕ್ಷಾ ಪದ್ಧತಿ ಕಂಡುಹಿಡಿದ ಪ್ರಖ್ಯಾತ ಮನ:ಶಾಸ್ತ್ರಜ್ಞ ಆಲ್ಫ್ರೆಡ್ ಬೈನೆಟ್ ಕೈಬರಹದ ಕೆಲ ಲಕ್ಷಣ ಆ ವ್ಯಕ್ತಿಯ ಜಾಣತನ ಬಿಂಬಿಸುತ್ತವೆಂದು ಖಚಿತಪಡಿಸಿದರು.

ಹೀಗಾಗಿ ವ್ಯಕ್ತಿತ್ವ ವಿಶ್ಲೇಷಣೆಯಲ್ಲಿ ಕೈಬರಹದ ವಿಶ್ಲೇಷಣೆಯೂ ಅಗತ್ಯ ಎಂದು ತಿಳಿಯಲಾಯಿತು.

## ಕೈಬರಹ ವ್ಯಕ್ತಿತ್ವದ ಅಂಕಿತ

ಕೈಬರಹ ವ್ಯಕ್ತಿಯ ತೀರ ವೈಯಕ್ತಿಕವಾದರೂ ಆತನ ವ್ಯಕ್ತಿತ್ವದ ಪ್ರತೀಕವೂ ಆಗಿರುತ್ತದೆ. ಇಬ್ಬರು ವ್ಯಕ್ತಿಗಳ ಕೈಬರಹ ಒಂದೇ ತೆರನಾಗಿ ಇರುವುದಿಲ್ಲ.

ಸರ್ ವಿಲಿಯಮ್ ಹರ್ಷ ವ್ಯಕ್ತಿಯನ್ನು ಬೆರಳಮುದ್ರೆ(ಫಿಂಗರ್ ಪ್ರಿಂಟ್)ಯಿಂದ ಗುರುತಿಸುವ ಪದ್ಧತಿಯನ್ನು ಕಂಡು ಹಿಡಿದರು. ಅದೇ ಲಕ್ಷಣ ಕೈಬರಹದಲ್ಲೂ ಎದ್ದು ಕಾಣುತ್ತದೆ.

ಫ್ರೆಂಚ್‌ನ ಮನಶಾಸ್ತ್ರಜ್ಞ ಪೈರೆ ಜಾನೆಟ್(1859–1947)ಕೈಬರಹದ ವಿಶ್ಲೇಷಣೆಯನ್ನು 'ಭವಿಷ್ಯದ ವಿಜ್ಞಾನ' ಎಂದು ಕರೆದು ಬರಹಗಾರನ ಬಾವನೆಯ ಫಿಲ್ಮ್ ರೆಕಾರ್ಡ್ ಎಂದು ಬಣ್ಣಿಸಿದರು.

ಇದೀಗ ಕಂಪ್ಯೂಟರ್ ಯುಗ. ಟಕ,ಟಕ ಎಂದು ಕಂಪ್ಯೂಟರ್‌ನಲ್ಲಿ ಬೇಕಾದ್ದನ್ನು ಮುದ್ರಿಸಿದರಾಯಿತು. ಇನ್ನು ಕಂಪ್ಯೂಟರ್ ಬರಹ ನೋಡಿ ವ್ಯಕ್ತಿತ್ವ ಗುರುತಿಸುವುದೆಂತು? ಈ ಕುರಿತು ವಿಜ್ಞಾನಿಗಳು ಮತ್ತಷ್ಟು ಸಂಶೋಧನೆ ನಡೆಸಬೇಕಿದೆ. ■